International Journal for Multidisciplinary Research (IJFMR)
E-ISSN: 2582-2160 ● Website: www.ijfmr.com ● Email: editor@ijfmr.com

# ವಚನ ಸಾಹಿತ್ಯದಲ್ಲಿ ಮನುಕುಲ ಜೀವನ ಮೌಲ್ಯಗಳ ಆಧಾರಿತ ಪ್ರೇರಣೆಗಳು ಮತ್ತು ಧೋರಣೆಗಳು : ಒಂದು ನೋಟ

**ಡಾ.ಸಿ. ಟಿ. ಜಯಣ್ಣ**

ಸಹ ಪ್ರಾಧ್ಯಾಪಕರು,

ಕನ್ನಡ ವಿಭಾಗ,

ಎಸ್ ಜೆ ಎಂ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಿ ಡಿ ರಸ್ತೆ . ಚಿತ್ರದುರ್ಗ, ಕರ್ನಾಟಕ ರಾಜ್ಯ, ಭಾರತ

**ಸಾರಾಂಶ:**

ಹನ್ನೆರಡನೆಯ ಶತಮಾನದ ವಚನ ವಾಙ್ಮಯವು ಕನ್ನಡದಲ್ಲಿ ಮಾತ್ರವಲ್ಲ ವಿಶ್ವಸಾಹಿತ್ಯದಲ್ಲಿಯೇ ಅತ್ಯಂತ ಮಹತ್ತ್ವದ ಸಾಹಿತ್ಯ ಪ್ರಕಾರ. ಒಂದು ಧಾರ್ಮಿಕ-ಸಾಮಾಜಿಕ ಆಂದೋಲನದ ಪ್ರಕ್ರಿಯೆಯಾಗಿ ಹೋರಾಟದ ಒಡಲಲ್ಲಿ ಜನ್ಮತಾಳಿ ಅನನ್ಯವಾದ ಜೀವನಾನುಭವಗಳನ್ನು ಮೈಗೂಡಿಸಿಕೊಂಡು ಚರಿತ್ರೆಯಲ್ಲಿ ಮಹತ್ತ್ವದ ಸ್ಥಾನ ಪಡೆದದ್ದು ವಚನ ಸಾಹಿತ್ಯದ ವೈಶಿಷ್ಟ್ಯವೇ ಸರಿ. ಇದು ಭರತಖಂಡದ ಸಾಹಿತ್ಯಕ್ಕೆ ಅಷ್ಟೇ ಅಲ್ಲದೇ ವಿಶ್ವಸಾಹಿತ್ಯಕ್ಕೆ ಒಂದು ಅಪೂರ್ವವಾದ ಕೊಡಿಗೆಯಾದುದು ಮಾತ್ರವಲ್ಲ ವಿಶ್ವಸಾಹಿತ್ಯದಲ್ಲಿ ಇಂಥ ಸಾಹಿತ್ಯ ಪ್ರಕಾರವು ತೀರಾ ವಿರಳವಾದುದು ಎನಿಸಿಕೊಂಡದ್ದು ಇದರ ಮತ್ತೊಂದು ವಿಶೇಷ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ವಚನ ಸಾಹಿತ್ಯದ ಜೀವನ ಮೌಲ್ಯಗಳು, ಪ್ರೇರಣೆಗಳು ಮತ್ತು ಧೋರಣೆಗಳು ಇತ್ಯಾದಿ ಸಂಗತಿಗಳನ್ನು ಒಳಗೊಂಡ ಒಂದು ವಿವೇಚನೆಯಿದೆ.

**ಪ್ರಮುಖ ಪದಗಳು:** ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಜೀವನ ಮೌಲ್ಯಗಳು, ಕಾವ್ಯ ಪ್ರಕಾರ

**ಪೀಠಿಕೆ:**

ಸಮಗ್ರ ವಚನ ಸಾಹಿತ್ಯ ಕನ್ನಡದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಒಂದು. ೧೧ನೇ ಶತಮಾನದ ಉತ್ತರಾರ್ಧದಲ್ಲಿ ಉದಯಿಸಿ ೧೨ನೇ ಶತಮಾನದ ಕಡೆಯವರೆಗೂ ಬಸವಣ್ಣನವರ-ಜನಸಾಮಾನ್ಯರ ಆಂದೋಲನದ ಭಾಗವಾಗಿ ಬೆಳೆದು ಬಂತು. ಇದು ಸಾಹಿತ್ಯ ಪರಿಭಾಷೆಯ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರದ ಕಾವ್ಯ. ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ ಕನ್ನಡದ ವಿಶೇಷ ಕಾವ್ಯ ಪ್ರಕಾರ. ವಚನ ಸಾಹಿತ್ಯವು ತನ್ನ ಕಾಲದಲ್ಲಿನ ಜನರ ಮನೋಭಿವ್ಯಕ್ತಿಗೆ ಸಂಗಾತಿಯಾಯಿತು. **ವಚನ** ಎಂದರೆ 'ಪ್ರಮಾಣ', 'ಕೊಟ್ಟ ಮಾತು' ಎಂದರ್ಥ. ಹನ್ನೆರಡನೆಯ ಶತಮಾನದ ವಚನ ಸಾಹಿತ್ಯವು ಕೇವಲ ಧಾರ್ಮಿಕ ಆಂದೋಲನವಾಗಿರದೆ, ಭಕ್ತಿ ಮತ್ತು ಸಮಾಜ ಸುಧಾರಣೆಯ ಮಹತ್ವದ ಕ್ರಾಂತಿಯಾಗಿತ್ತು. ಬಸವೇಶ್ವರರು, ಅಲ್ಲಮಪ್ರಭು,

ಅಕ್ಕಮಹಾದೇವಿ ಮೊದಲಾದ ಶರಣರು ಸರಳ ಕನ್ನಡದಲ್ಲಿ ವಚನಗಳನ್ನು ರಚಿಸಿ ಸಮಾನತೆ, ಕಾಯಕ ಮತ್ತು ದೈವಭಕ್ತಿಯ ಮೌಲ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸಿದರು.

ಸತ್ಯಕ್ಕನವರು ತಮ್ಮ ವಚನಗಳಲ್ಲಿ ಸಮಾಜದಲ್ಲಿ ಯಾವ ರೀತಿಯಾದ ಬದುಕನ್ನು ಪ್ರತಿಯೊಬ್ಬರು

ಕಟ್ಟಿಕೊಳ್ಳಬೇಕು ಎಂಬುದನ್ನು ಈ ರೀತಿ ಸರಳವಾಗಿ ತಿಳಿಸಲು ಪುಯತ್ನಿಸುತ್ತಾರೆ.

ಅರ್ಚನೆ ಪೂಜನೆ ನೇಮವಲ್ಲ

ಮಂತ್ರ ತಂತ್ರ ನೇಮವಲ್ಲ

ಧೂಪ ದೀಪಾರತಿ ನೇಮವಲ್ಲ

ಪರಧನ, ಪರಸ್ತ್ರೀ ಪರದೈವಂ

ಗಳಿಗೆರಗದಿಪ್ಪುದೆ ನೇವು

ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯ ನೇಮ.

ಸ್ತ್ರೀ ಪರವಾದ ಮೌಲ್ಯಗಳು ಎಂಬುವುದಾಗಿ ಬಣ್ಣಿಸಿರುವರು.

ಮುಖೇನ ಹಿಡಿದ ಕೆಲಸವನ್ನು ಪಟ್ಟುಬಿಡದೆ ಅದನ್ನು ಮಾಡಿಯೇ ತೀರುತ್ತೇನೆ ಎಂದು ನಂಬಿಕೆಯಿಂದ ಮಾಡಿದಾಗ ಯಶಸ್ಸು ಎಂಬುದನ್ನು ನಾವು ಕಾಣಬಹುದು. ಸಮಾಜದಲ್ಲಿ ಸಮಾನತ ಎಂಬುದು ಅತ್ಯವಶ್ಯಕ ಎಂಬ ವಿಚಾರವನ್ನು ತಿಳಿಸಿರುತ್ತಾರೆ.

ಆಸೆಯಂಬುದು ಅರಸಿಂಗಲ್ಲದೆ,

ಶಿವಭಕ್ತರಿಗುಂಟೆ ಅಯ್ಯಾ?

ರೋಷವೆಂಬುದು ಯಮದೂತರಿಗಲ್ಲದೆ,

ಅಜಾತರಿಗುಂಟೆ ಅಯ್ಯಾ ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ.

ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ.

ಆಯ್ದಕ್ಕಿ, ಲಕ್ಕಮ್ಮನವರ ಪ್ರಕಾರ ನಾವು ಸೀಮೀತವಾದ ಈ ಬದುಕಿನಲ್ಲಿ ಅತಿಯಾದ ಆಸೆಯನ್ನು

ಇಟ್ಟುಕೊಳ್ಳಬಾರದು, ಆವೇಶ, ಕೋಪ, ಉದ್ವೇಗಗಳನ್ನು ತ್ಯಜಿಸಿಬಿಡುವುದು ಅತ್ಯುತ್ತಮವಾದುದಾಗಿದೆ.

ಇದನ್ನು ಬಹಳ ಸರಳವಾಗಿ ಹಾಗೂ ಸರಳವಾದ ಉದಾಹರಣೆಗಳ ಮೂಲಕ ಹೇಳುವ ಪ್ರಯತ್ನವನ್ನು

ಕೈಗೊಂಡಿರುತ್ತಾರೆ. ಈಗೇ ವಚನ ಸಾಹಿತ್ಯದ ಶ್ರೀಮಂತಿಕೆಗೆ ನೂರಾರು ಜನ ಶರಣರು ಶ್ರಮಿಸಿದ್ದಾರೆ. ತಮ್ಮ ವಚನಗಳಲ್ಲಿ ತಮ್ಮದೇ ಆದ ಅಂಕಿತನಾಮಗಳನ್ನು ಬಳಸಿದ್ದಾರೆ. ದೇವರ ದಾಸಿಮಯ್ಯ 'ರಾಮನಾಥ' ಎಂದು ಬಳಸಿದರೆ, ಅಕ್ಕಮಹಾದೇವಿಯು 'ಚೆನ್ನಮಲ್ಲಿಕಾರ್ಜುನ' ಹಾಗೂ ಬಸವಣ್ಣನವರು 'ಕೂಡಲ ಸಂಗಮದೇವ' ಮತ್ತು ಎಂದು ಬಳಸಿದ್ದಾರೆ. ಮತ್ತಿತರ ಸುಪ್ರಸಿದ್ಧ ವಚನಕಾರರು ಸಹಾ ಇಲ್ಲಿ ತಮ್ಮದೇ ಆದ ಪ್ರೇರಣೆಗಳು ಮತ್ತು ಧೋರಣೆಗಳನ್ನು ಸಹಾ ಉತ್ತಮ ಮಾನವ ಸಮಾಜ ನಿರ್ಮಾಣಕ್ಕೆ ಕೊಡುಗೆಯಾಗಿ ನೀಡಿರುವುದು.

**ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು:**

ವಚನ ಸಾಹಿತ್ಯವು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅಮೂಲ್ಯ ಸಂಪತ್ತಾಗಿದೆ. ಇದು 12ನೇ ಶತಮಾನದಲ್ಲಿ ಜನಿಸಿದ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದ್ದು, ಬಸವಾದಿ ಶರಣರು ಇದನ್ನು ಜನಸಾಮಾನ್ಯರಿಗೆ ತಲುಪುವಂತೆ ಮಾಡಿದರು. ವಚನ ಸಾಹಿತ್ಯವು

ಧಾರ್ಮಿಕ, ಸಾಮಾಜಿಕ ಮತ್ತು ದಾರ್ಶನಿಕ ಚಿಂತನೆಗಳನ್ನು ಒಳಗೊಂಡಿದೆ ಮತ್ತು ಭಕ್ತಿ ಚಳವಳಿಯ ಪ್ರಮುಖ ಭಾಗವಾಗವೂ ಆಗಿದೆ.

ವಚನ ಸಾಹಿತ್ಯವು 'ಸಮಾನತೆ', 'ಶ್ರಮ'-'ಕಾಯಕ' ಮತ್ತು 'ಭಕ್ತಿ'ಯ ಮಹತ್ವ, ಪ್ರಾಮಾಣಿಕತೆ ಹಾಗೂ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಶರಣರು ಜಾತಿ, ಲಿಂಗ, ಆರ್ಥಿಕ ಸ್ಥಿತಿ ಮುಂತಾದ ಬೇಧಭಾವಗಳನ್ನು ತಿರಸ್ಕರಿಸಿದರು. ಅಲ್ಲದೆ ಇವರು ಜಾತಿ-ವರ್ಣಭೇದಗಳ ವಿರೋಧವಾಗಿಯೂ ಮತ್ತು ಸಮಾನತೆಗೆ ಹೆಚ್ಚಿನ ಮನ್ನಣೆಯನ್ನು ನೀಡಿದರು. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಮೊದಲಾದ ಶರಣರು "ಕಾಯಕವೇ ಕೈಲಾಸ", "ದಾಸೋಹದ ತತ್ತ್ವ", "ಅನುಭವ ಮಂಟಪ"ದ ಪರಿಕಲ್ಪನೆಯ ಮೂಲಕ ಪ್ರಜಾಪ್ರಭುತ್ವದ ನ್ಯಾಯಯುತ ಸಮಾಜದ ನಿರ್ಮಾಣಕ್ಕೆ ಹೇಗೆ ಶ್ರಮಿಸಿದರು ಎಂಬುದನ್ನು ಭಿನ್ನ ವಚನಕಾರರ ಹಿನ್ನೆಲೆಯಲ್ಲಿ ವಿವರಿಸಿ, ವಿಶ್ಲೇಷಿಸುವುದಾಗಿದೆ.

ವಚನಗಳಲ್ಲಿ ಪುರುಷ ಮತ್ತು ಮಹಿಳೆಯ ನಡುವಿನ ಭೇದವನ್ನು ಪ್ರಶ್ನಿಸಿ, ಶಿವಶರಣ ಭಕ್ತರ ಸಮುದಾಯದಲ್ಲಿ ಪ್ರತಿಯೊಬ್ಬರಲ್ಲೂ ಸಮಾನತೆಯನ್ನು ಕಾಣುತ್ತಾ ಪ್ರಾಮಾಣಿಕ ಶ್ರಮ ಮತ್ತು ಸಮಾಜ ಸೇವೆಯ ಪ್ರಾಮುಖ್ಯತೆಯನ್ನು ವಿಶ್ಲೇಷಿಸಲಾಗಿದೆ. ಈ ಸಾಹಿತ್ಯ ಪ್ರಕಾರವು ಅಂತರಂಗ ಮತ್ತು ಬಹಿರಂಗದ ಪ್ರಾಮುಖ್ಯತೆ, ಅವು ದೈನಂದಿನ ಜೀವನದಲ್ಲಿ ಹೇಗೆ ದೀರ್ಘಕಾಲಿಕವಾಗಿ ವ್ಯಕ್ತಿಯ ಆಂತರಿಕ ಹಾಗೂ ಬಾಹ್ಯ ಬೆಳವಣಿಗೆಯ ಮೇಲೆ ಪ್ರಭಾವ ಬೀರುವುದು ಎಂಬುದನ್ನು ಚರ್ಚಿಸಲಾಗುವುದು.

ವಚನಗಳು ಸತ್ಯ ಮತ್ತು ಚಿತ್ತ ಶುದ್ಧ ಭಕ್ತಿಯ ತತ್ವಗಳ ಮೂಲಕ ಸಮಾಜದ ಪರಿವರ್ತನೆಗೆ ಶ್ರಮಿಸಿದ ಬಗೆ ಹೇಗೆ? ಮತ್ತು ಪ್ರಸ್ತುತ ಸಂದರ್ಭಕ್ಕೂ ವಚನ ಸಾಹಿತ್ಯದ ತತ್ತ್ವಗಳು ಸಾಮಾಜಿಕ ನ್ಯಾಯದ ಪರಿಪ್ರೇಕ್ಷ್ಯದಲ್ಲಿ ಅವುಗಳ ಪ್ರಾಧಾನ್ಯತೆಯನ್ನು ಪ್ರಸ್ತುತತೆಯನ್ನು ಕುರಿತು ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಸಾಹಿತ್ಯವು ಶರಣ ಪರಂಪರೆಯ ಜೀವನ ಶೈಲಿಯನ್ನು ಪ್ರತಿಬಿಂಬಿಸುವುದರೊಂದಿಗೆ, ನೈತಿಕ ಜೀವನ ಮೌಲ್ಯಗಳನ್ನು ಬೋಧಿಸುವ ಪ್ರಭಾವಿ ಮಾಧ್ಯಮವಾಗಿದೆ. ವಚನ ಸಾಹಿತ್ಯವು ಕೇವಲ ಧಾರ್ಮಿಕ ಮತ್ತು ಸಾಹಿತ್ಯಿಕ ಪ್ರಕಾರವಲ್ಲದೆ, ಅದು ಸಾಮಾಜಿಕ ಕ್ರಾಂತಿಯ ಸಂಕೇತವಾಗಿ, ಮಾನವೀಯತೆಯ ಸಿದ್ಧಾಂತಗಳ ಸಾರಥಿಯಾಗಿ ಹೇಗೆ ನಿಲ್ಲಬಲ್ಲದು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

**೧. ವಚನ ಸಾಹಿತ್ಯದ ಪ್ರೇರಣೆಗಳು**

**ಅ) ಸಾಮಾಜಿಕ ಅಸಮಾನತೆಯ ವಿರುದ್ಧದ ಕಿಚ್ಚು ಕುರಿತಾದ ಪ್ರೇರಣೆ:**

**ಪ್ರಮುಖ ಪ್ರೇರಣೆಗಳು**

**೧. ವಚನ ಸಾಹಿತ್ಯದ ಪ್ರೇರಣೆಗಳು**

**ಅ) ಸಾಮಾಜಿಕ ಅಸಮಾನತೆಯ ವಿರುದ್ಧದ ಕಿಚ್ಚು ಕುರಿತಾದ ಪ್ರೇರಣೆ:**

ಜಾತಿ ಪದ್ಧತಿ, ಲಿಂಗ ತಾರತಮ್ಯ ಮತ್ತು ಮೂಢನಂಬಿಕೆಗಳು ಸಮಾಜವನ್ನು ಕಬಳಿಸಿದ್ದ ಕಾಲದಲ್ಲಿ, ಎಲ್ಲ ಮಾನವರೂ ಸಮಾನರು ಎಂಬ ಕಲ್ಪನೆಯೇ ವಚನಗಳ ಮುಖ್ಯ ಪ್ರೇರಣೆಯಾಗಿತ್ತು.

**ಆ) ಭಕ್ತಿ ಮಾರ್ಗ ಮತ್ತು ಆತ್ಮಾವಲೋಕನ ಕುರಿತು ಪ್ರೇರಣೆ:**

ಸಂಸ್ಕೃತದ ಕ್ಲಿಷ್ಟಕರವಾದ ಯಜ್ಞ-ಯಾಗಾದಿಗಳು ಜನಸಾಮಾನ್ಯರಿಗೆ ನಿಲುಕದಿದ್ದಾಗ, ಭಕ್ತಿಯ ಮೂಲಕವೇ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವ ಸರಳ ಮಾರ್ಗವನ್ನು ಶರಣರು ತೋರಿಸಿಕೊಟ್ಟರು.

**ಇ) ಕಾಯಕ ಮತ್ತು ದಾಸೋಹ ಪ್ರೇರಣೆ:**

'ಕಾಯಕವೇ ಕೈಲಾಸ' ಎಂಬ ತತ್ವದ ಮೂಲಕ ದುಡಿಮೆಯ ಘನತೆಯನ್ನು ಸಾರಲಾಯಿತು. ದುಡಿದು ತಿನ್ನುವ ಪ್ರಾಮಾಣಿಕತೆ ಮತ್ತು ಗಳಿಕೆಯಲ್ಲಿ ಸಮಾಜದ ಹಂಚಿಕೆಯೇ (ದಾಸೋಹ) ವಚನಕಾರರ ಮೂಲ ಪ್ರೇರಣೆಯಾಗಿತ್ತು.

**ಈ) ಅನುಭಾವದ ಅನುಭವ ಪ್ರೇರಣೆ:** ಪುಸ್ತಕದ ಜ್ಞಾನಕ್ಕಿಂತ, ಸ್ವಂತ ಅನುಭವ ಮತ್ತು ಅಂತರಂಗದ ಶುದ್ಧಿಗೆ ಹೆಚ್ಚಿನ ಒತ್ತು ನೀಡಲಾಯಿತು.

**ಧೋರಣೆಗಳು**

**ಅ) ಜಾತಿರಹಿತ ಸಮಾಜ ನಿರ್ಮಾಣ:**

ಹುಟ್ಟಿನಿಂದ ಯಾರೂ ಶ್ರೇಷ್ಠರಲ್ಲ ಎಂಬ ಧೋರಣೆಯನ್ನು ಹೊಂದಿದ್ದ ಶರಣರು, ಕೆಳವರ್ಗ ಹಾಗೂ ಮೇಲ್ವರ್ಗವೆಂಬ ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಂಡರು.

ಆ) **ಮಾನವೀಯ ಮೌಲ್ಯಗಳ ಪ್ರತಿಪಾದನೆ:**

ಪ್ರಾಣಿ ಬಲಿ, ಮೂಢನಂಬಿಕೆ ಹಾಗೂ ಅಸ್ಪೃಶ್ಯತೆಯಂತಹ ಆಚರಣೆಗಳನ್ನು ಬಲವಾಗಿ ವಿರೋಧಿಸಿ, ಕರುಣೆ, ಪ್ರೀತಿ ಮತ್ತು ಸತ್ಯದ ಮಾರ್ಗವನ್ನು ಬೋಧಿಸಿದರು.

**ಇ) ಮಹಿಳಾ ಸಮಾನತೆ ಮತ್ತು ಸ್ವಾತಂತ್ರ್ಯ:**

ವಚನ ಚಳುವಳಿಯು ಮಹಿಳೆಯರಿಗೆ ಆಧ್ಯಾತ್ಮಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ತಂದುಕೊಟ್ಟಿತು. ಅಕ್ಕಮಹಾದೇವಿ, ನೀಲಾಂಬಿಕೆ ಮುಂತಾದ ಶರಣೆಯರು ಸ್ವತಂತ್ರವಾಗಿ ವಚನಗಳನ್ನು ರಚಿಸಿ, ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಿದರು.

**ಈ) ಭಾಷಾ ಸರಳತೆ:**

ಪಾಂಡಿತ್ಯಪೂರ್ಣ ಭಾಷೆಗಿಂತ, ಜನಸಾಮಾನ್ಯರ ಆಡುಭಾಷೆಯನ್ನು (ದೇಶಿ ಭಾಷೆ) ಬಳಸಿ ಆಧ್ಯಾತ್ಮಿಕ ಚಿಂತನೆಗಳನ್ನು ಸರಳವಾಗಿ ಪ್ರಸ್ತುತಪಡಿಸಿದರು.

**ಉಪಸಂಹಾರ:**

ಒಟ್ಟಾರೆಯಾಗಿ ವಚನಕಾರ್ತಿಯರು ತಮ್ಮ ವಚನಗಳ ಮೂಲಕ ಜೀವನ ಮೌಲ್ಯಗಳ ವಿಚಾರಗಳನ್ನು ತಮ್ಮ ತಮ್ಮ ದೃಷ್ಟಿಕೋನದ. ಮೂಲಕ ವಿಭಿನ್ನವಾದ ರೀತಿಯಲ್ಲಿ ಸರಳವಾದ., ಉದಾಹರಣಗಳ ಮೂಲಕ. ಅಭಿವ್ಯಕ್ತಪಡಿಸಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆಸಮಾಜದಲ್ಲಿ ಜೀವನಮೌಟ್ಯಗಳು.. ಬಹಳ ಅತ್ಯವಶ್ಯಕವಾದುದಾಗಿದೆ.

**ಪರಾಮರ್ಶನ ಗಂಥಗಳು:**

೧.ಅಕ್ಕನ ವಚನಗಳು: ಸಂ.ಡಾ.ಸಾ.ಶಿ. ಮರಳಯ್ಯ: ಪ್ರಕಟಣೆ:ರಾಗಿಣಿ ಶಿಕ್ಷಣ ಪ್ರತಿಷ್ಠಾನ, ಬೆಂಗಳೂರು: ೧೯೯೩

೨. ಅಮುಗೆ ರಾಯಮ್ಮನ ವಚನಗಳುಇದು ಶಿವಶರಣೆಯರ ಸಮಗ್ರ ಸಂಪುಟದ ಒಂದು ಭಾಗ ಸಂ.ಡಾ.ಆರ್‌ಸಿ. ಹಿರೇಮಠ, ಪ್ರಕಟಣೆ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೭೮

೩ ಅಕ್ಕಮ್ಮನ ವಚನಗಳು/ಇದು ಶಿವಶರಣೆಯರ ಸಮಗ್ರ ಸಂಪುಟದ ಒಂದು ಭಾಗ) ಸಂ.ಡಾ.ಆರ್.ಸಿ. ಹಿರೇಮಠ, ಪ್ರಕಟಣೆ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪.ಆಚರಣೆ ಸಂಬಂಧದ ವಚನಗಳು - ಸಂಪಾದನೆಯ ಸಿದ್ಮ ವೀರೇಶ್ವರ ದೇವರು, ಸ, ಪ್ರಕಾಶಕರು: ಶರಣ ಸಂತಾನ ಪ್ರಕಾಶನ, ೪೪೭, ಸಂತೇಪೇಟೆ, ಮೈಸೂರು-೧೯೮೦.

೫. ಶಿವಶರಣೆಯರ ವಚನ ಸಂಪುಟಡಾ.ವೀರಣ್ಣ ರಾಜೂರ: ಪ್ರಕಾಶಕರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೧೯೯೩.